ನೀವು ಕಣ್ಣು ತೆರೆಯಲಿಕ್ಕೆ ಇನ್ನೂ ಸಮಯ ಇದೆ. ಅದಿನ್ನೂ ಮೀರಿ ಹೋಗಿಲ್ಲ. ನಿಮ್ಮ ಅಧಿಕಾರ ಅವಧಿಯ ಐದು ವರ್ಷದಲ್ಲಿ ಕೇವಲ ಒಂದು ವರ್ಷ, ಮೂರು ತಿಂಗಳು ಮಾತ್ರ ಕಳೆದು ಹೋಗಿದೆ. ಇನ್ನಷ್ಟು ಮರು ಪರಿಶೀಲನ ಮಾಡಿ, ಇನ್ನಷ್ಟು ಚಿಂತನೆ ಮಾಡಿ, ಎಲ್ಲಿ ನಾವು ಹಾದಿ ತಪ್ಪಿದ್ದೇವೆ ಎನ್ನುವುದನ್ನು ತಿಳಿದುಕೊಂಡು ಆ ಮೂಲಕ ತಮ್ಮ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಬೇಕು ಎಂದು ಹೇಳುವುದು ಮಾತ್ರವಲ್ಲ, ನಿಮ್ಮ ಸರ್ಕಾರ ಒಂದು ಒಳ್ಳೆಯ ಆಡಳಿತ, ಒಂದು ಹೊಸ ರೀತಿಯ ಆಡಳಿತ ಕೊಟ್ಟಿದೆ ಎನ್ನುವ ಕೀರ್ತಿಗೆ ಪಾತ್ರರಾಗಬೇಕು ಎನ್ನುವಂತಹ ಒಂದು ವಿಚಾರಧಾರೆಯಿಂದಲೇ ನಾನು ಈ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ತಮಗೆ ಕೃತಜ್ಞತೆಗಳು.

ಅಧ್ಯಕ್ಷರು : ದಯಮಾಡಿ ಎಲ್ಲರಿಗೂ ಮನವಿ ಮಾಡಿಕೊಳ್ಳುತ್ತಿದ್ದೇನೆ. ಭೋಜನ ವಿರಾಮದ ನಂತರ ಮಾನ್ಯ ಸದಸ್ಯರೆಲ್ಲರೂ ಪುನಃ ಸದನಕ್ಕೆ ತಪ್ಪದೇ ಬರಬೇಕು. ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನ ಪುನಃ 3.30 ಗಂಟೆಗೆ ಸಮಾವೇಶ ಗೊಳ್ಳುತ್ತದೆ.

(ಸದನವು 2.28ಕ್ಕೆ ಮುಕ್ತಾಯಗೊಂಡು ಮತ್ತೆ 3.30ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆಯು ಸಂಜೆ 4.10 ಗಂಟೆಗೆ ಪುನಃ ಸಮಾವೇಶಗೊಂಡಿತು.)

(ರಮೇಶ್ ಕುಮಾರ್)ರವರು ಪೀಠವನ್ನು ಅಲಂಕರಿಸಿದ್ದರು)

## ಮಂತ್ರಿಗಳ ಹೇಳಿಕೆ

### ವೃತ್ತಿ ಶಿಕ್ಷಣ ಹೆಚ್ಚುವರಿ ವಿಭಾಗ ಹಾಗೂ ಬೋಧಕೇತರ ಸಿಬ್ಬಂದಿಗಳ ಬೇಡಿಕೆ ಬಗ್ಗೆ ಸರ್ಕಾರದ ಘೋಷಣೆ.

ಶ್ರೀ ಹೆಚ್. ಜೆ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ವೃತ್ತಿಶಿಕ್ಷಣ, ಹೆಚ್ಚುವರಿ ವಿಭಾಗ ಹಾಗೂ ಬೋಧಕೇತರ ಸಿಬ್ಬಂದಿಗಳ ಬೇಡಿಕೆಗೆ ಸಂಬಂಧಪಟ್ಟಂತೆ ಈ ಹೇಳಿಕೆಯನ್ನು ಸಭೆಯು ಮುಂದೆ ಮಂಡಿಸಬಯಸುತ್ತೇನೆ.

**1. ವೃತ್ತಿ ಶಿಕ್ಷಣ** : ರಾಜ್ಯದಲ್ಲಿ ವೃತ್ತಿ ಶಿಕ್ಷಣವನ್ನು ಕೇಂದ್ರ ಸರ್ಕಾರದ ಧನ ಸಹಾಯದಿಂದ ನಡೆಸಲಾಗುತ್ತಿದೆ. ಈ ವೃತ್ತಿ ಶಿಕ್ಷಣದ ನೌಕರರು ಪೂರ್ಣವಾಗಿ ಹಂಗಾಮಿ ನೌಕರರಾಗಿದ್ದು ಇವರನ್ನು ಖಾಯಂಗೊಳಿಸುವಂತೆ ಬೇಡಿಕೆ ಇಡಲಾಗಿದೆ. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ 10 ವರ್ಷ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸುವಂತೆ ತೀರ್ಪಿತ್ತಿದೆ. ರಾಜ್ಯ ಸರ್ಕಾರ ಈ ನೌಕರರ ಮನವಿಯನ್ನು ಪರಿಗಣಿಸಿ 7 ವರ್ಷ ಸೇವೆ ಸಲ್ಲಿಸಿದ ಎಲ್ಲಾ ನೌಕರರನ್ನು ಖಾಯಂಗೊಳಿಸಲು ಕ್ರಮ ಕೈಗೊಳ್ಳಲಿದೆ. ಇದರಿಂದಾಗಿ ಇಲಾಖೆಯ ಸುಮಾರು 1200 ನೌಕರರಿಗೆ ತಕ್ಷಣ ಅನುಕೂಲವಾಗುತ್ತದೆ; ಉಳಿದವರು ಕ್ರಮೇಣ ಈ ಸೌಲಭ್ಯ ಪಡೆಯುತ್ತಾರೆ. ಸರ್ಕಾರಕ್ಕೆ ಅಂದಾಜು ರೂ ಒಂದು ಕೋಟಿ ಹೆಚ್ಚುವರಿ ಖರ್ಚು ಬೀಳಲಿದೆ.

**2. ಹೆಚ್ಚುವರಿ ವಿಭಾಗ** : ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹೆಚ್ಚಳದಿಂದಾಗಿ ಹೆಚ್ಚುವರಿ ವಿಭಾಗ ತೆರೆಯಲು ಅನುಧಾನ ರಹಿತ ಷರತ್ತಿನ ಮೇಲೆ ಅನುಮತಿ ನೀಡಲಾಗಿತ್ತು. ಆದರೆ ಈಗ ಈ ಹೆಚ್ಚುವರಿ ವಿಭಾಗದ ಅಗತ್ಯತೆಯನ್ನು ಮನಗಂಡು ಮತ್ತು ಅವರ ಸಮಸ್ಯೆಯನ್ನು ಅರಿತು ಸರ್ಕಾರ ಈ ನೌಕಕರಿಗೆ ಅನುದಾನ ನೀಡಲು ತೀರ್ಮಾನಿಸಿದೆ. ಇದಕ್ಕಾಗಿ ಸರ್ಕಾರ ಸುಮಾರು ರೂ. 2.00 ಕೋಟಿ ಹೆಚ್ಚಾಗಿ ಖರ್ಚು ಮಾಡಬೇಕಾಗುತ್ತದೆ.

**3. ಬೋಧಕೇತರ ಸಿಬ್ಬಂದಿ** : ಅನುದಾನಿತ ಶಾಲಾ ಕಾಲೇಜುಗಳಲ್ಲಿ ಕೆಲಸ ಮಾಡುವ ಬೋಧಕೇತರ ಸಿಬ್ಬಂದಿಗೆ ಅನುದಾನ ನೀಡಲು ಬಹಳ ದಿನಗಳಿಂದ ಬೇಡಿಕೆ ಇದೆ. ಅರ್ಥಿಕ ದಿಗ್ಬಂದನ ವಿದ್ದುದರಿಂದ ಪ್ರೌಢಶಾಲೆಗೆ ಒಬ್ಬ ಎರಡನೇ ದರ್ಜೆ ಗುಮಾಸ್ತ, ಪದವೀ ಪೂರ್ವ ಕಾಲೇಜಿಗೆ ಒಬ್ಬ ಪ್ರಥಮ ದರ್ಜೆ ಗುಮಾಸ್ತನಿಗೆ ಹಾಗೂ ವಿಜ್ಞಾನ ವಿಭಾಗ ವಿರುವ ಕಡೆ ಒಬ್ಬ ಪ್ರಯೋಗಾಲಯ ಸಹಾಯಕನಿಗೆ ಅನುದಾನ ನೀಡಲು ಈ ಹಿಂದೆ ಸರ್ಕಾರ ಸಮ್ಮತಿಸಿತ್ತು. ಈಗ ಇವರ ಬೇಡಿಕೆಯಂತೆ 1.6.92ರ ಮೊದಲು ನೇಮಕಗೊಂಡ ಎಲ್ಲಾ ಅನುಮೋದಿತ ಬೋಧಕೇತರ ಸಿಬ್ಬಂದಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಇದಕ್ಕಾಗಿ ಸರ್ಕಾರಕ್ಕೆ ಸುಮಾರು ರೂ. 1.25 ಕೋಟಿ ಹೆಚ್ಚು ಹೊರೆ ಬೀಳಲಿದೆ.

ಈಗ ಬಹಳ ದಿವಸಗಳಿಂದ ಅವರು ಉಪವಾಸತ್ಯಾಗ್ರಹವನ್ನು ಮಾಡುತ್ತಿರುವುದು ಸಾರ್ವಜನಿಕರ ಮತ್ತು ಸರ್ಕಾರದ ಗಮನಕ್ಕೆ ಬಂದಿದೆ. ಅವರು ಈ ಉಪವಾಸವನ್ನು ನಿಲ್ಲಿಸಿ ಯಾರ್ಯಾರಿಗೆ ಏನೇನು ಜವಾಬ್ದಾರಿಯನ್ನು ನಾವು ವಹಿಸಿದ್ದೇವೆ ಅದನ್ನು ಪ್ರಾಮಾಣಿಕತೆಯಿಂದ ಕೆಲಸಮಾಡಲು ಕೂಡಲೇ ಅವರವರ ಸ್ಥಾನಗಳಿಗೆ ವಾಪಸು ಹೋಗಬೇಕೆಂದು ಈ ಸದನದ ಮುಖಾಂತರ ಅವರಲ್ಲಿ ಪ್ರಾರ್ಥಿಸುತ್ತೇನೆ.

## (ಮಾನ್ಯ ರಾಜ್ಯಪಾಲರ ಭಾಷಣಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ) (ಮುಂದುವರೆದ ಚರ್ಚೆ)

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೆ, 1 ವರ್ಷ 3 ತಿಂಗಳ ನಂತರ ಅದು ಮಾನ್ಯ ರಾಜ್ಯಪಾಲರ ಭಾಷಣ ಇರಬಹುದು ಅಥವಾ ಈ ಸದನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ಚರ್ಚೆಯ ಸಂಬಂಧದಲ್ಲಿರುವ ವಾತಾವರಣವನ್ನು ನೋಡಿದರೆ ಎಲ್ಲಾ ಹುರುಪು, ಉತ್ಸಾಹಗಳನ್ನು ಕಳೆದುಕೊಂಡಿರುವುದನ್ನು ನಾವು ನೋಡುತ್ತಿದ್ದೇವೆ. ಒಂದು ರೀತಿಯಲ್ಲಿ ಮಾನ್ಯ ರಾಜ್ಯಪಾಲರುಮಾಡಬೇಕಾದ ಒಂದು ರಿಚ್ಯುಯಲ್ ಎಂದು ತಿಳಿದುಕೊಂಡು ಭಾಷಣವನ್ನು ಇಲ್ಲಿ ಮಂಡಿಸಿ ಅದರ ವಿರುದ್ಧ ರಿಚ್ಯುಯಲಿಸ್ಟಿಕ್ ಪ್ರೊಟೆಸೆಸ್ಟನ್ನೂ ಕೂಡ ನೋಡುತ್ತಿದ್ದೇವೆ. ನಮ್ಮಮುಂದಿಟ್ಟಿರುವ ಭಾಷಣವನ್ನು ನೋಡಿದರೆ ಇದು ಒಂದು ರೀತಿಯ ಮ್ಯಾನ್ಯಫ್ಯಾಕಚರ್ಡ್ ಸ್ಪೀಚ್ ಎಂದು ನನಗಿಸುತ್ತದೆ. ಯಾವುದೇ ರೀತಿಯ ಇನವಾಲ್ವಮೆಂಟ್ ಇದರಲ್ಲಿಲ್ಲ. ಆದರೆ ಇರತಕ್ಕ ಒಂದೇ ಒಂದು ಇನ್‌ವಾಲ್ವ್‌ಮೆಂಟ್ ಎಂದರೆ ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ" ನನ್ನ ಸರ್ಕಾರ. ಎಂದು 38 ಸಾರಿ ಹೇಳಿದ್ದಾರೆ. ಆದರೆ ಇಂಗ್ಲೀಷ್‌ನಲ್ಲಿ ಮೈ ಗೌರ್ನಮೆಂಟ್ ಎಂದು 36 ಸಾರಿ ಹೇಳಿದ್ದಾರೆ. 2 ಸಾರಿ ಏತಕ್ಕೆ ಕಡಿಮೆ ಹೇಳಿದ್ದಾರೋ ಗೊತ್ತಿಲ್ಲ.